

ಸುಧಾ

ಪೋರ್ಚ್‌ಗಲ್‌ನ ಲಿಸ್ಬನ್‌ನ ಈ ಪ್ರದರ್ಶನ ಮಕ್ಕಳಾಟಕ್ಕೆ ಸಂಬಂಧಿಸಿದ್ದಲ್ಲ. ಚೀನಾದ ಪ್ರಸಿದ್ಧ ಕಲಾವಿದ ಅಯ್ ವೀವೀ ಅವರ ‘ರ್‍ಯಾಪ್ಚರ್’ ಹೆಸರಿನ ಈ ಕಲಾ ಪ್ರದರ್ಶನ ‘ಕೋವಿಡ್ 19’ ಸಾಂಕ್ರಾಮಿಕ ತಲೆದೋರುವ ಸ್ವಲ್ಪ ಸಮಯದ ಮುಂದಷ್ಟೇ ನಡೆದಿತ್ತು. ಜೀವನಾಶಕ ಸಾಂಕ್ರಾಮಿಕ ವಿಶ್ವವ್ಯಾಪಿಯಾಗುವಲ್ಲಿ ಚೀನಾದ ಕೈವಾಡ ಇರಬಹುದೆನ್ನುವ ಊಹೆಯ ಸಂದರ್ಭದಲ್ಲಿ, ಇಲ್ಲಿನ ಕಲಾಕೃತಿಗಳು ಜೀವಪರ ಸೃಷ್ಟಿಯ ಸಾಧ್ಯತೆಗಳನ್ನು ಬಿಂಬಿಸುವಂತಿವೆ. ಫೋಟೊ: ಎಎಫ್‌ಪಿ